ಸದರಿ ಕಾಮಗಾರಿಗಳನ್ನು ಯೋಜನೆಯ ಮುಂದಿನ ಹಂತಗಳಲ್ಲಿ ಆರ್ಥಿಕ ಸಂಪನ್ಮೂಲ ಲಭ್ಯತೆಗೆ ಅನುಸಾರ ಕೈಗೊಳ್ಳಲಾಗುವುದು.

230 ಶ್ರೀ ಬಾಲಕೃಷ್ಣ ಹೆಚ್.ಸಿ(ಮಾಗಡಿ)
ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)

ಅ) ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನಲ್ಲಿರುವ ಸಾವನದುರ್ಗ ಅರಣ್ಯ ಪ್ರವಾಸೋದ್ಯಮ ಕೇಂದ್ರದಲ್ಲಿ "ಕೆಂಪೇಗೌಡ ವನಧಾಮ" ಪ್ರಾರಂಭಿಸಲು ಯಾವಾಗ ಅನುಮೋದನೆ ನೀಡಲಾಯಿತು; ಇದರ ರೂಪುರೇಶೆಗಳೇನು?

ಮಾಗಡಿ ತಲ್ಲೂಕಿನಲ್ಲಿರುವ ಸಾವನದುರ್ಗ ಅರಣ್ಯ ಪ್ರವಾಸೋಧ್ಯಮ ಕೇಂದ್ರದಲ್ಲಿ "ಕೆಂಪೇಗೌಡ ವನಧಾಮ" ಪ್ರಾರಂಬಿಸಲು ಈ ಹಿಂದೆ 1993–94ನೇ ಸಾಲಿನಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ಬೆಂಗಳೂರು ಇವರು ಯೋಜನೆಯೊಂದನ್ನು ರೂಪಿಸಿದ್ದು, ಸದರಿ ಯೋಜನೆಯು ದಿನಾಂಕ 29.06.1994 ರಿಂದ ಪ್ರಾರಂಭಗೊಂಡಿರುತ್ತದೆ. ಯೋಜನೆಯ ಉದ್ದೇಶಗಳು ಈ ಕೆಳಗಿನಂತಿರುತ್ತವೆ:–

1. ಗ್ರಾಮೀಣ ಭಾಗದ ಜನತೆಯಲ್ಲಿ ಪರಿಸರ ಕುರಿತು ಅರಿವನ್ನು ಮೂಡಿಸುವುದು.
2. ಸಾವನದುರ್ಗ ಬೆಟ್ಟದಲ್ಲಿ ಟ್ರಕ್ಕಿಂಗ್, ಪ್ರಾಕೃತಿಕ ಶಿಬಿರ ಕೈಗೊಳ್ಳಲು ಅವಶ್ಯಕ ಪರಿಸರ ಮೂಡಿಸುವುದು.
3. ಒಂದು ಉತ್ತಮ ಪ್ರವಾಸ ಕೇಂದ್ರವನ್ನಾಗಿ ಮಾಡುವುದು.

ಆ) ಈ ವನಧಾಮದ ಪ್ರಗತಿ ಯಾವ ಹಂತದಲ್ಲಿದೆ;

ಪ್ರಸ್ತುತ 12ನೇ ಆರ್ಥಿಕ ಹಣಕಾಸು ಆಯೋಗದಂತೆ ಪ್ರವಾಸಿಗಳಿಗೆ ಪ್ರವಾಸೋದ್ಯಮ ಸೌಲಭ್ಯ, ಡಾರ್‌ಮೆಟ್ರಿ ನಿರ್ಮಾಣಕ್ಕೆ 50.00 ಲಕ್ಷ ಅನುದಾನ ಕಾಯ್ದಿರಿಸಿದ್ದು ಈ ಕಾಮಗಾರಿಗಳನ್ನು ಅರಣ್ಯ ಇಲಾಖಾ ಮೂಲಕ ಕೈಗೊಳ್ಳಲು ಉದ್ದೇಶಿಸಿದೆ ಎಂದು ನಿರ್ದೇಶಕರು, ಪ್ರವಾಸೋಧ್ಯಮ ಇಲಾಖೆಯವರು ಅವರ ಪತ್ರದ ದಿನಾಂಕ 23.02.2008ರಲ್ಲಿ ತಿಳಿಸಿರುವ ಮೇರೆಗೆ ಸದರಿ ಅಧಿಕಾರಿಯವರಿಗೆ ದಿನಾಂಕ 24.06.2008ರಲ್ಲಿ ಪತ್ರ ಬರೆದು ಹಣ ಬಿಡುಗಡೆ ಮಾಡಲು ಕೋರಲಾಗಿತ್ತು. ನಂತರ ನಿದೇಶಕರು, ಪ್ರವಾಸೋದ್ಯಮ ಇಲಾಖೆ ಇವರು ದಿನಾಂಕ 19.09.2008ರಲ್ಲಿ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ಸಲ್ಲಿಸಲು ಕೋರಿದ್ದರ ಮೇರೆಗೆ ಕೆಂಪೇಗೌಡ ವನಧಾಮವನ್ನು ಪುನಶ್ಚೇತನಗೊಳಿಸುವ ಬಗ್ಗೆ ವಲಯ ಅರಣ್ಯಾಧಿಕಾರಿ, ಮಾಗಡಿಯವರ ಸಂಕ್ಷಿಪ್ತ ಯೋಜನೆಯನ್ನು ಸಲ್ಲಿಸಿದ್ದು, ಈ ಯೋಜನೆಗಳಲ್ಲಿ ಪ್ರವಾಸೋಧ್ಯಮ ಇಲಾಖೆಯವರು ಪ್ರಸ್ತಾಪಿಸಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು

ಗ್ರಾಮಾಂತಯರ ಉಪ ವಿಭಾಗ ಇವರಿಗೆ ದಿನಾಂಕ 03.10.2008 ರಂದು ಕ್ರಿಯಾ ಯೋಜನೆ ಮಂಡಿಸಲು ನಿರ್ದೇಶನ ನೀಡಲಾಗಿದೆ.

ಇ) ಎಷ್ಟು ಕಾಲಮಿತಿಯಲ್ಲಿ ಸುಸಜ್ಜಿತ ಸೌಕರ್ಯಗಳುಳ್ಳ ವನಧಾಮವನ್ನು ರೂಪಿಸಲಾಗುವುದು?

ಕೆಂಪೇಗೌಡ ವನಧಾಮವನ್ನು ಸುಸಜ್ಜಿತ ಸೌಕರ್ಯಗಳುಳ್ಳ ವನಧಾಮವನ್ನಾಗಿ ರೂಪಿಸಲು ಆದಷ್ಟು ಬೇಗ ಕ್ರಮ ಕೈಗೊಳ್ಳಲಾಗುವುದು.

13ನೇ ವಿಧಾನಸಭೆ 3ನೇ ಅಧಿವೇಶನ

231 ಶ್ರೀ ಶಿವಲಿಂಗೇಗೌಡ ಕೆ.ಎಂ.

ಸಿ.ಎಂ.ಉದಾಸಿ ಲೋಕೋಪಯೋಗಿ ಸಚಿವರು

ಅ) ಲೋಕೋಪಯೋಗಿ ಇಲಾಖೆಯಿಂದ ಕೇಂದ್ರ ರಸ್ತೆ ನಿದಿ (ಸಿ.ಆರ್.ಎಫ್) ಅಡಿಯಲ್ಲಿ 2008–09 ಸಾಲಿನಲ್ಲಿ ಮಂಜೂರಾದ ಹಣವೆಷ್ಟು (ತಾಲ್ಲೂಕುವಾರು, ಜಿಲ್ಲಾವಾರು ಹಂಚಿಕೆ ಮಾಡಲಾದ ಅನುದಾನದ ವಿವರಗಳು ಹಾಗೂ ಕಾಮಗಾರಿಗಳ ಪಟ್ಟಿಯನ್ನು ಒದಗಿಸುವುದು)?

ಕೇಂದ್ರ ಸರ್ಕಾರದಿಂದ ಕೇಂದ್ರ ರಸ್ತೆ ನಿದಿ ಯೋಜನೆಯಡಿ 2008–09ನೇ ಸಾಲಿಗೆ 354 ಕಾಮಗಾರಿಗಳು ರೂ.553.50 ಕೋಟಿ ಮೊತ್ತಕ್ಕೆ ಮಂಜೂರಾಗಿರುತ್ತವೆ. ಕೇಂದ್ರ ಸರ್ಕಾರದ ಮಾರ್ಗ ಸೂಚಿಗಳನ್ವಯ ಹಂಚಿಕೆ ಮಾಡಲಾಗುತ್ತದೆ. ತಾಲ್ಲೂಕು ಜಿಲ್ಲಾವಾರು ಹಂಚಿಕೆ ಉದ್ಭವಿಸುವುದಿಲ್ಲ.

ಆ) ಲೋಕೋಪಯೋಗಿ ಇಲಾಖೆಯಿಂದ ಕೇಂದ್ರ ರಸ್ತೆ ನಿದಿ (ಸಿ.ಆರ್.ಎಫ್) ಅಡಿಯಲ್ಲಿ 2008–09ನೇ ಸಾಲಿನಲ್ಲಿ ಅನುದಾನ ವಂಚಿತ ತಾಲೂಕು ಮತ್ತು ಜಿಲ್ಲೆಗಳು ಯಾವುವು (ವಿವರಗಳನ್ನು ಒದಗಿಸುವುದು)?

ಕೇಂದ್ರ ರಸ್ತೆನಿದಿ ಯೋಜನೆಯ ಮಾರ್ಗಸೂಚಿಗಳನ್ವಯ ಅಗತ್ಯತೆಗೆ ಅನುಸಾರವಾಗಿ ಕಾಮಗಾರಿಗಳನ್ನು ಮಂಜೂರು ಮಾಡಲಾಗುತಯ್ತದೆ. ಆದರೆ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಹಂಚಿಕೆಗೆ ಅವಕಾಶವಿರುವುದಿಲ್ಲ. ಆದುದರಿಂದ ವಿವರಗಳನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಯೋಜನೆಯಡಿಯಲ್ಲಿ ಅನುದಾನ ಹಂಚಿಕೆ ಮಾಡಲು ಅನುಸರಿಸಬೇಕಾದ ಮಾನದಂಡಗಳೇನು?

ಕೇಂದ್ರ ಸರ್ಕಾರದ ಸುತ್ತೋಲೆಯಲ್ಲಿಯ ಮಾನದಂಡಗಳು ಈ ಕೆಳಗಿನಂತಿವೆ.

1. ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆಗಳು(ಗ್ರಾಮೀಣ ರಸ್ತೆ ಹೊರತುಪಡಿಸಿ)